ಗುಣಿಸಿ ನಾನೊಂದು(ನನ್ನನ್ನು ನಂಬಿ ಪ್ಲೀಸ್) 30 ವರ್ಷಗಳ ಮಾಸ್ಟರ್ ಪ್ಲಾನ್ ಮಾಡಿಕೊಂಡಿದ್ದೆ.

ಸ್ವಂತ ಮನೆ (ಇಂದೂ) ಇಲ್ಲದ ನನ್ನೆದುರು ಅಂದು ಹಲವು 'ಲೋಕ'ಗಳಿದ್ದವು; ಆದ್ದರಿಂದಲೇ ನನ್ನ ಕಥಾ ಪಾತ್ರಗಳ ಬದುಕಿಗಾಗಿ 'ಮುತ್ತುಪ್ಪಾಡಿ' ಎಂಬ ನನ್ನದೇ ಆದ 'ಲೋಕ'ವನ್ನು ಕಟ್ಟಿಕೊಂಡಿದ್ದೆ. ಮುತ್ತುಪ್ಪಾಡಿಯ ತುಂಬ ಮನುಷ್ಯರನ್ನು, ಅವರಿಗೆ ನಂಬಲೆಂದು ದೇವರುಗಳನ್ನು, ಪೂಜಿಸಲು ಮಂದಿರಗಳನ್ನು, ಪ್ರಾರ್ಥಿಸಲು ಮಸೀದಿಗಳನ್ನು, ಆರಾಧಿಸಲು ಚರ್ಚುಗಳನ್ನು, ಓದಲು ಶಾಲೆಗಳನ್ನು, ಆಡಲು ಬಯಲುಗಳನ್ನು, ಕವಾಯತಿಗೆ ಮೈದಾನಗಳನ್ನು, ಆಳಲು ಪೊಲೀಸರನ್ನು, ವಂದಿಸಲು ಧ್ವಜಗಳನ್ನು, ಈಜಲು ಹೊಳೆಗಳನ್ನು, ಹಾರಲು ಕೆರೆಗಳನ್ನು, ಮಲಗಲು ಆಸ್ಪತ್ರೆಗಳನ್ನು, ಸುಡಲು ಸ್ಮಶಾನಗಳನ್ನು, ಹೂಳಲು ಕಬರಸ್ಥಾನಗಳನ್ನು ಹೀಗೆ, ನಾಗರಿಕ ಜೀವನಕ್ಕೆ ಏನೇನೂ ಬೇಕೋ ಅವೆಲ್ಲವನ್ನೂ ಒದಗಿಸಿದ್ದೆ. ಆ ನಂತರ ಮುತ್ತುಪ್ಪಾಡಿಯ ಮನುಷ್ಯರಿಗೆ ಅವರಿಷ್ಟದಂತೆ ಬದುಕುವ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಅವರದೇ ಬದುಕಿನ ಕತೆಗಳನ್ನು ಒಂದೊಂದಾಗಿ ಬರೆಯಲಾರಂಭಿಸಿದ್ದೆ.

ನನ್ನ ಪ್ರತಿಯೊಂದು ಕತೆಯ ಪ್ರತಿಯೊಂದು ಸಾಲನ್ನೂ ಹರಿತವಾದ ಎರಡು ಅಲಗುಗಳ ಕತ್ತಿಯಂತೆ ಚೂಪುಗೊಳಿಸುತ್ತಿದ್ದ ವಿಮರ್ಶಕರೆಂದರೆ ಮುತ್ತುಪ್ಪಾಡಿಯ ಮನುಷ್ಯರು ಮಾತ್ರ. ನನಗೆ ಚೆನ್ನಾಗಿ ಗೊತ್ತಿತ್ತು, ಅದೊಂದು ಬಗೆಯಲ್ಲಿ, ಎರಡು ದೋಣಿಗಳಲ್ಲಿ ಕಾಲಿಟ್ಟು ನದಿ ದಾಟುವ ಸಾಹಸ. ಮುತ್ತುಪ್ಪಾಡಿಯ ಮುಸ್ಲಿಮರನ್ನು, 'ಹೌದಾ! ನಾವು ಇಷ್ಟೊಂದು ಕೆಟ್ಟದಾಗಿ ಬದುಕುತ್ತಿದ್ದೇವಾ?' ಎಂದು ಎಚ್ಚರಿಸುವ ಜೊತೆಯಲ್ಲೇ ಮುಸ್ಲಿಮೇತರರಿಗೆ, 'ಹೌದಾ! ಮುಸ್ಲಿಮರು ನಾವೆಲ್ಲ ಎಣಿಸಿದಂತೆ ಅಷ್ಟೊಂದು ಕೆಟ್ಟವರಲ್ಲ, ಅಲ್ಲವಾ?' ಎಂಬ ಅರಿವು ಮೂಡಿಸುವುದು.

ನನ್ನ ಕತೆಗಳು, ಅವುಗಳ ಭಾಷೆಯ ಬಗ್ಗೆ, ನಿರೂಪಣಾ ವಿನ್ಯಾಸಗಳ ಬಗ್ಗೆ, ಕಥಾಸಂವಿಧಾನಗಳ ಬಗ್ಗೆ ಚರ್ಚೆಯಾದದ್ದಕ್ಕಿಂತ ಹೆಚ್ಚಾಗಿ ಅವುಗಳ ವಸ್ತುವಿಶೇಷತೆಗಳಿಗಾಗಿಯೇ ಸುದ್ದಿಯಾಗುತ್ತಿದ್ದವು. ನನ್ನ ಒಂದು ಕತೆಯನ್ನು ಓದಿದ ಕೂಡಲೇ ನನ್ನನ್ನು 'ಭಲೇ!' ಎನ್ನುತ್ತಿದ್ದವರೇ ಇನ್ನೊಂದು ಕತೆಯನ್ನು ಓದಿ 'ಎಲಾ!' ಎನ್ನುತ್ತಿದ್ದರು. ಇನ್ನೊಂದು ಕತೆ ಓದಿ 'ಎಲಾ' ಎನ್ನುತ್ತಿದ್ದವರೇ ಮತ್ತೊಂದು ಕತೆ ಓದಿದಾಗ 'ಭಲೇ' ಎನ್ನುತ್ತಿದ್ದರು. ನಾನು ಈ 'ಭಲೆ', 'ಎಲಾ'ಗಳನ್ನು ಒಂದೇ ಬಗೆಯಲ್ಲಿ ನಿರ್ಭಾವುಕವಾಗಿ ಸ್ವೀಕರಿಸಿದವನಂತೆ ನಟಿಸುತ್ತಿದ್ದೆ. ಯಾಕೆಂದರೆ ನನ್ನದು ಮೂವತ್ತು ಜೀವಂತವರ್ಷಗಳ ಮಾಸ್ಟರ್ ಪ್ಲಾನ್. 'ಸಾಹಿತ್ಯದಿಂದ ಸಾಮಾಜಿಕ ಬದಲಾವಣೆ ಅಸಾಧ್ಯ' ಎಂಬ ಬಹುಪ್ರಚಾರದ ಮಾತಿನಲ್ಲಿ ನನಗೆ ವಿಶ್ವಾಸವಿರಲಿಲ್ಲ; ಈಗಲೂ ಇಲ್ಲ. ಆ ಮಾತುಗಳು ನಿಜವಾಗಿರುತ್ತಿದ್ದರೆ, ನಮ್ಮೆಲ್ಲಾ ಧರ್ಮಗ್ರಂಥಗಳು ಕಸದ ಬುಟ್ಟಿಗಳನ್ನು ಸೇರಿಕೊಳ್ಳುತ್ತಿದ್ದವು.

ನಾನು ಬರೆದ ಕತೆಗಳೆಲ್ಲವನ್ನೂ ಪ್ರಜಾವಾಣಿ, ಸುಧಾ, ಮಯೂರ, ಉದಯವಾಣಿ, ತರಂಗ, ಮಲ್ಲಿಗೆ, ಕಸ್ತೂರಿ, ಕರ್ಮವೀರ ಹೀಗೆ ಕನ್ನಡದ ಎಲ್ಲ ಪತ್ರಿಕೆಗಳೂ ಪೈಪೋಟಿಯಿಂದ ಪ್ರಕಟಿಸುತ್ತಿದ್ದವು. ಕತೆಗಳ ವಸ್ತು ಕನ್ನಡದ ಕಥಾಲೋಕಕ್ಕೆ ಹೊಸದಾಗಿದ್ದದ್ದೂ ಅವರೆಲ್ಲರ ಉತ್ಸಾಹಕ್ಕೆ ಕಾರಣವಾಗಿದ್ದಿರಬಹುದು. ಸನ್ಮಾನ್ಯರಾದ ಶ್ರೀನಿವಾಸ ಕುಡ್ವ, ಬನ್ನಂಜೆ ಗೋವಿಂದಾಚಾರ್ಯ, ಈಶ್ವರಯ್ಯ, ಎಂ.ಬಿ. ಸಿಂಗ್, ಜಿ.ಎನ್. ರಂಗನಾಥರಾವ್, ಪಾ.ವೆಂ. ಆಚಾರ್ಯ, ಎಸ್. ದಿವಾಕರ್, ಸುಮತೀಂದ್ರ ನಾಡಿಗ್ ಮೊದಲಾದ ಆ ಕಾಲದ ಹಿರಿಯ ಸಂಪಾದಕರೆಲ್ಲರಿಗೆ ನಾನಿಂದೂ, ಮುಂದೂ ಕೃತಜ್ಞನಾಗಿರುವೆ. ಗೆಳೆಯರಾದ ಈಶ್ವರಚಂದ್ರ, ಲಿಂಗದೇವರು ಹಳೆಮನೆ, ಡಿ.ಆರ್. ನಾಗರಾಜ್ ಮೊದಲಾದ ಗೆಳೆಯರು ನನ್ನ ಬರಹಗಳನ್ನು ತಿದ್ದಿ